RegdNo B G 155 Sri 9—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅವಧಾನೇಂದ್ರರ್ ಎಂ ವಿ ಸುಬ್ಬಂಕಾಂಪುರು ಸಂಪಾದಕರ – ಧರ್ಮಪ್ರಚಾರಿಣಿ ಎಂ.ಎಸ್ ಕೃಷ್ಣಂಕಾವ್ 2ಸೈ

ವಾನಪ್ರಸ್ಥ

ಒರಿಸ್ಸಾ ಪ್ರದೇಶ ಕಾಂಗ್ರೆಸ್ಸಿನಲ್ಲಿನ ಐಕ್ಯತೆಗೆ ಅವಶ್ಯಬಿದ್ದರೆ ತಾವು ರಾಜಕೀಯ ಬಿಟ್ಟು ವಾನಪ್ರಸ್ಥಕ್ಕೆ ತೆರಳುವುದಾಗಿ ಶ್ರೀ ಬಿಜೂ ಪಾಟ್ನಿಕ್ ಹೇಳಿದರು

★

ಅಣುವಿನಿಂದ ವಿದ್ಯುಚ್ಛಕ್ತಿ

ಸೆಲಂ (ತಮಿಳುನಾಡು) — ಅಣುವಿನಿಂದ ವಿದ್ಯುಚ್ಛಕ್ತಿಯು ಇನ್ನು 30 ವರ್ಷಗಳೊಳಗೆ ದೊರೆಯುವುದೆಂದು ಅಮೀರಿಕಾ ಅಟಾಮಿಕ್ ಕಮಿಷನ್ನಿನ ಮಾಜಿ ಅಧ್ಯಕ್ಷರು ಹೇಳಿದರು.

ಅಮೇರಿಕಾದ ಹೊಣೆ

ವಾಷಿಂಗ್ಟನ್ — ಇಡೀ ವಿಶ್ವದ ನಿಚಾರಗಳನ್ನು ಸರಿಪಡಿಸಲು ಅಮೇರಿಕಾಕ್ಕೆ ಅಧಿಕಾರವಾಗಲೀ ಹೊಣೆಯಾಗಲೀ ಇಲ್ಲವೆಂದು ವೈಟು ಸೆಕ್ರಟರಿ ಡೀನ್ ರಸ್ಕ್ ಹೇಳಿದರು: ವಿಶ್ವಕ್ಕೆಲ್ಲಾ ಹೊಣೆಗಾರಿಕೆಯಿರುವುದು ಸಮಗೆ ಇಷ್ಟವೂ ಇಲ್ಲ, ಸಾಧ್ಯವೂ ಇಲ್ಲವೆಂದೂ, ದಮ್ಮ ಸುರಕ್ಷತೆಯು ಇತರ ಸ್ವತಂತ್ರ ದೇಶಗಳ ಸುರಕ್ಷತೆ ಜೊತೆಯನ್ನವಲಂಬಿಸಿದೆ ಎಂದೂ ಹೇಳಿದರು.

ಭಾಷಾಭಿವೃದ್ಧಿಗಾಗಿ

ಶ್ರೀನಗರ — ಯೂನಿವರ್ಸಿಟಿ ಕಮಿಷನ್ನಿನ ರೀತಿ ಭಾರತ ಭಾಷೆಗಳ ಅಭಿವೃದ್ಧಿಗಾಗಿ ಬೋರ್ಡನ್ನು ಸ್ಥಾಪಿಸಲು ಸ್ಥಾನಿಗ ಕಮಿಷನ್ ಯೋಜಿಸಿದೆ

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯವ್ಯವಕ್ತ, ಜ್ಯೋತಿರ್ವಿದ್ವನ್ಮಣಿ
ಪಂಪಕೃಷ್ಣಜೋಯಿಸರಂಡ
10 ಗಂ.ವಾರ ದ್ವಾದಶಿ ಸ್ವಾತಿ

ನಾಮಾಂಕಿತ

ಶ್ರೀನಗರ — ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಪ್ರಸಿದ್ಧ ವ್ಯಕ್ತಿಗಳ ಹೆಸರನ್ನು ವಿಶ್ವವಿದ್ಯಾನಿಲಯಗಳಿಗಿಡಲು ನಿರ್ಧರಿಸಲಾಗಿದೆ

ಚೀನಾದಲ್ಲಿ ವಿವಾಹ

ಚೀನಾದಲ್ಲಿ ವಿವಾಹವು ಗಡವಿಡಿ ಕಾರ್ಯವಾಗಿದೆ; ಯುವಕರು ಮದುವೆ ಮುಂಚೆ 5 ಪರೀಕ್ಷೆಗಳನ್ನು ಮಾಡಬೇಕು. 30 ವರ್ಷಕ್ಕೆ ಕಡಮೆ ಪುರುಷರೂ 25 ವರ್ಷಕ್ಕೆ ಕಡಮೆ ಸ್ತ್ರೀಯರೂ ವಿವಾಹಕ್ಕೆ ಅರ್ಜಿ ಹಾಕಿಕೊಳ್ಳಗದು. ಸನಾತಂಧ ಸತ್ಕಾರಗಳು ಬಹಳ ಸರಳವಾಗಿರಬೇಕು. ಹೊಸ ದಂಪತಿಗಳಿಗೆ ಮನೆಗಳಾಗಲೀ ಉಪ್ಪರಿಗೆ ಮೇಲಿನ ವಾಸದ ಕೋಣೆಗಳನ್ನಾಗಲೀ ನಿಗದಿಮಾಡಲ್ಪಡುವುದಿಲ್ಲ. ಮದುವೆ ರಿಜಿಸ್ಟರಿಗೆ ಮುಂಚೆ ನಾಯಕರ ಅಪ್ಪಣೆ ಪಡೆದಿರಬೇಕು. ಮದುವೆ ನಂತರ ಹೆಂಡತಿಯುಳಿ ತಮ್ಮ ಹಿಂದಿನ ಕೆಲಸಗಳಿಗೆ ಹೋಗಬೇಕು.

ಗ್ರಾಮೀಣ ಸ್ವಾಸ್ಥ್ಯ ಕಾರ್ಯ

ಬೆಂಗಳೂರು — ಮೈಸೂರು ಗ್ರಾಮೀಣ ವರು ಶ್ರೀ ಗಿರಿಯವರು ತಮ್ಮ ಸಂಬಳದಲ್ಲಿ 1966 ಮಾರ್ಚ್ ಕಡೆಯವರೆಗೆ ತಮ್ಮ ಸಂಬಳದಲ್ಲಿ ಪ್ರತಿ ತಿಂಗಳೂ ರೂ 500 ಬಿಟ್ಟುಬಿಡುವುದಾಗಿ ವಂದಿಯಾಗಿದೆ

ಚಂದ್ರಗ್ರಹದಲ್ಲಿ

ವಾಷಿಂಗ್ಟನ್ — ಮಾನವನು ಚಂದ್ರಗ್ರಹದಲ್ಲಿ 1969 ರ ಹೊತ್ತಿಗೆ ಇಳಿಯುವುದು ಹೇಳಲಾಗಿದೆ

★

ಆಹಾರ ವಲಯಗಳು

ನೆಲ್ಲೂರು — ಆಹಾರ ವಲಯಗಳು ರಜಾ ಆಗಬೇಕೆಂದು ಸ್ವತಂತ್ರ ಪಾರ್ಟಿ ಮನವಿ ಮಾಡಿದೆ.

ಪ್ರಧಾನಿ ಶಾಸ್ತ್ರಿಗಳವರ ವಿದೇಶ ಪ್ರವಾಸ

ನವದೆಹಲಿ — ಪ್ರಧಾನಿ ಶಾಸ್ತ್ರಿಗಳವರು ನಿನ್ನೆ ವಿದೇಶಾಂಗ ಸಚಿವ ಸರ್ದಾರ್ ಸ್ವರಣ್ ಸಿಂಗ್, ಸಂಯುಕ್ತ ಅರಬ್ ರಿಪಬ್ಲಿಕ್ ಕೆನಡ ಅಲ್ಜೀರ್ಸ್‌ಗಳ ಸೌಹಾರ್ದ ಮತ್ತು ರಾಜಕೀಯ ವಿದೇಶ ಪ್ರವಾಸವನ್ನು ಪ್ರಾರಂಭಿಸಿದರು

★

ಪಾಕಿಸ್ತಾನ ಅಕ್ರಮಿಸಿರುವ ಸ್ಥಳ

ನವದೆಹಲಿ — ಪಾಕಿಸ್ತಾನವು ಕಿರುಕಾದಲ್ಲಿ ಇತ್ತೀಚೆಗೆ ದಾಟಿಬಂದು 5 ಚದರು ಮೈಲಿ ಸ್ಥಳವನ್ನು ಮೂರು ವರ್ಷಗಳಿಂದ ಅಕ್ರಮಿಸಿ ಅದಕ್ಕೆ ಅಸಲತಾಂಗು ಮೌಜ ಎಂಬ ಹೆಸರಿಟ್ಟಿರುವ ಸ್ಥಳವನ್ನು ಚಿಡಿಸಿಕೊಳ್ಳಲು ಕಿರುಕಾ ಸರಕಾರವು ಭಾರತ ಸರಕಾರವನ್ನು ಒತ್ತಾಯ ಮಾಡಿದೆ.

ಪಾಕಿಸ್ತಾನಕ್ಕೆ ಪ್ರತಿಭಟನೆ

ನವದೆಹಲಿ — ಭಾರತ ಭೂಮಿ ಪಾಕಿಸ್ತಾನ ಕಿತ್ತಿರಿಂದ ಮೇ 3 ಮತ್ತು 17 ರಲ್ಲಿ ಪೂರ್ವ ಪಾಕ್ ರೈಫಲ್ಸಿನವರು ದಬ್ಬಾಳಿಕೆ ಅಕ್ರಮಣ ಚಟುವಟಿಕೆ ನಡೆಸಿದುದಂ ಬಗ್ಗೆ ಭಾರತವು ಪ್ರತಿಭಟನೆ ಸಲ್ಲಿಸಿದೆ

ಭಾರತದ ಸಾಲ

ಬೊಂಬಾಯಿ — ಮತ್ತೆ ಭಾರತ ಸರಕಾರಕ್ಕೆ ಪಶ್ಚಿಮ ಜರ್ಮನಿ ಡಿಎಂ 3 ಎಯ ಸಾಲವನ್ನು ಕೊಟ್ಟಿದೆ: ಇದು ಭಾರತದ ಮೂರನೇ ಪಂಚವಾರ್ಷಿಕ ಯೋಜನೆಯ ನಾಲ್ಕನೇ ವರ್ಷಕ್ಕೆ ಅಡ್ವಾನ್ಸು ಮಾಡಲು ಒಪ್ಪಿದ್ದ ಹಣದ ಒಳಗು ಭಾಗ

ಚೀನಾಕ್ಕೆ ಫ್ರಾನ್ಸಿನ ಟ್ರಕ್ಕುಗಳು

ಪೀಕಿಂಗ್ — ಫ್ರಾನ್ಸಿನ ಒಂದು ಕಂಪೆನಿಯು ಚೀನಾಕ್ಕೆ 1000 ಹೆವಿ ಡ್ಯೂಟಿ ಟ್ರಕ್ಕುಗಳನ್ನು ಮಾರಿದುದಾಗಿ ವರದಿಯಾಗಿದೆ – ಟ್ರಕ್ಕುಗಳಿಗೆ ಸರಾ 30000 ಡಾಲರುಗಳೆಂದು ಪೀಕಿಂಗು ವಾರ್ತೆ.

ಪಿಕ್ ಪಾಕೆಟ್‌ಗಳ ಮನವಿ

ಡಾಕಾ — ಪೋಲೀಸರ ಹಿಂಸೆಯಿಂದ ತಮ್ಮನ್ನು ರಕ್ಷಿಸಬೇಕೆಂದು 50 ಮಂದಿ ಪಿಕ್‌ಪಾಕೆಟ್‌ಗಳು ಡೆಪ್ಯೂಟಿ ಕಮಿಷನರಲ್ಲಿ ಮನವಿ ಮಾಡಿದ್ದಾರೆ: ತಾವು ಈ ಕಸುಬನ್ನು ಬಿಡಬೇಕೆಂದಿರುವುದಾಗಿಯೂ ಆದರೆ ಪೋಲೀಸರು ಅದಕ್ಕೆ ಅವಕಾಶ ಕೊಡುತ್ತಿಲ್ಲವೆಂದು ತಿಳಿಸಿದ್ದಾರೆ; ವಾರಕ್ಕೆ ಅದವಾ ತಿಂಗಳಿಗೆ ಪೋಲೀಸರು ಒಂದು ಭಾಗ ರಾಯಲ್ಟಿಯಾಗಿ ಪಡೆಯುತ್ತಿರುವರೆಂದೂ ಹೇಳಿದ್ದಾರೆ.

ಕಾಜಾರಂಬಾಗಿನಲ್ಲಿ ಬೆಸಲು ತಾಪದಿಂದ ನಾಲ್ಕು ಮಂದಿ ಸತ್ತರು.

ಅಡಿಸಬಾಬ — ಭಾರತ ರಾಷ್ಟ್ರಾಧ್ಯಕ್ಷರು ಅಕ್ರೋಬರಿನಲ್ಲಿ ಇತಿಯೋಪಿಯಾಕ್ಕೆ ಭೇಟಿ ಕೊಡುವರೆಂದು ಅಧಿಕೃತ ಪ್ರಕಟನೆ ಹೊಂಟಿದೆ

ಬೆಲ್ಗ್ರೇಡು — ಬಾಸಿಯಾದ ಕಲಿಜ್ಜಲು ಗಣಿಯಲ್ಲಿ ಗ್ಯಾಸಿನಿಂದ ಸ್ಫೋಟದಿಂದ 104 ಮಂದಿ ಸತ್ತರು

★

ಭಿಂಡಿಯಲ್ಲಿರುವ ಡಲ್ಲೆ ಆವಾರದ ಥೈಲ್ಯಾಂಡಿನಲ್ಲಿ ಶತ್ರು ಕೇಳಿದಾಗಿ

ಶಾಸ್ತ್ರಧರ್ಮ ಪ್ರಚಾರ ಸಭಾ

Sastra Dharma Prachara Sabha

(ಮುಂದುವರಿದುದು)

ಧರ್ಮ ಮಾರ್ಗದಲ್ಲಿರಲು ಬಯಸುವ ಶಾಸ್ತ್ರಗಳನ್ನು ತಿಳಿಯಲು ಬಯಸುವ ಯಾವ ಸನಾತನಿ ಹಿಂದುವಾದರೂ ಕೂಡ ಈ ಸಭೆಗೆ ಸದಸ್ಯನಾಗಬಹುದು: ಪಾ್ರಂಭದಲ್ಲಿ ಒಂದು ಪ್ರತಿಜ್ಞೆಯನ್ನು ಸ್ವೀಕರಿಸಿ ಈಪ್ರತಿಜ್ಞಾಪತ್ರಕ್ಕೆ ರುಜುಮಾಡಿದ ಕೂಡಲೇ ಅತನು ಶಾಸ್ತ್ರಧರ್ಮ ಪ್ರಚಾರ ಸಭೆಯ ಸದಸ್ಯನಾಗುತ್ತಾನೆ ; ಅತನು ಸಭೆಯಿಂದ ಕಂಜಲಾಗುತ್ತಿರುವ ಇಂಗ್ಲೀಷು ಅಥವಾ ಹಿಂದಿ ಪುಸ್ತಕಗಳನ್ನು ಓದಬೇಕು ; ಅವೆಂಡು ಭಾಷೆಗಳೂ ಬರದೇಇದ್ದವಂತಾದರೆ ಕನ್ನಡದಲ್ಲಿರುವ ಕೆಲವು ಪುಸ್ತಕಗಳನ್ನು ಬೆಲೆಕೊಟ್ಟು ಕೊಂಡುಕೊಂಡು ಓದಬೇಕು : ತನಗೆ ಯಾವುದಾದರೂ ಸಂಶಯ ಬಂದಲ್ಲಿ ಕಲ್ಕತ್ತಾ ಸಭೆಯವರಿಗಾಗಲಿ ಅಥವಾ ಸವಿಾಪದಲ್ಲಿಂದ ಅದು ಶಾಖೆಗಾಗಲೀ ತಿಳಿಸಿ ತಿಳಿ ತನ್ನ ಸಂಶಯ ಪರಿಹಾರ ಮಾಡಿಕೊಳ್ಳಬೇಕ .

ಈ ರೀತಿ ಶಾಸ್ತ್ರಗಳ ಬಗ್ಗೆ ಶ್ರದ್ಧೆಯನ್ನು ಹೊಂದಿದಬಳಿಕ ಕಲ್ಕತ್ತಾ ಸಭೆಯಿಂದ ಹೆಚ್ಚಿನ ಪುಸ್ತಕಗಳನ್ನು ತರಿಸಿ ತನ್ನ ಬಂಧುಮಿತ್ರರಿಗೆ ಹಂಚಬೇಕು : ಸವಿಾಪದಲ್ಲಿಂದ ಶಾಖೆಗೆ ಚಂದಾಕೊಟ್ಟು ಅದಕ್ಕೂ ಸದಸ್ಯನಾಗಬೇಕು : ಪೇವಂಲ್ಲಿ ಪೂರ್ಣವಾದ ಭಕ್ತಿಯನ್ನಿಡಬೇಕು ; ಶಾಸ್ತ್ರಗಳಲ್ಲಿ ಹೇಳಿರುವಂತೆ ದಿನನಿತ್ಯ ತನ್ನ ಆಚಾರ ವ್ಯವಹಾರಗಳನ್ನು ನಡೆಸಲು ಪ್ರಯತ್ನಿಸಬೇಕು : ತಕೆಸು ಮಾಡುತ್ತಿರುವ ಶಾಸ್ತ್ರಧರ್ಮ ಪ್ರಚಾರ ಸಭೆಯ ಕೆಲಸವನ್ನೂ, ತನ್ನ ಜೀವನೋಪಾಯಕ್ಕಾಗಿ ನಡೆಸುತ್ತಿರುವ ಕೆಲಸಗಳನ್ನೂ, ತನ್ನ ಗೃಹಕೃತ್ಯದಲ್ಲಿ ಮಾಡಬೇಕಾದ ಕೆಲಸವನ್ನೂ ಶ್ರೀ ಹರಿಯ ಕೈಂಕರ್ಯ ರೂಪವಾಗಿ ನೋಡುತ್ತಿದ್ದೇನೆಂದು ಭಾವಿಸಬೇಕು : ಪಾ್ರಂಭದಲ್ಲಿ ಇವೆಲ್ಲಾ ಕಠಿಣವಾಗಿ ಕಂಡರೂ, ಸ್ವಲ್ಪ ಅಭ್ಯಾಸವಾದಮೇಲೆ ಬಹಳ ಸುಲಭವಾಗಿಬಿಡುತ್ತದೆ : ಸಂಸಾರ ತಾಪತ್ರಯಗಳು ಬಹಳವಮಟ್ಟಿಗೆ ಕಮ್ಮಿಯಾಗುತ್ತದೆ ; ಮನಶ್ಯಾಂತಿ ಲಭಿಸುತ್ತದೆ ; ಇದನ್ನು ಪುಸ್ತಕದ ಓದಿನಿಂದ ಹೇಳುತ್ತಿಲ್ಲ ; ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ,

ಈಗೆಯೇ ಪ್ರತಿಯೊಬ್ಬ ಹಿಂದುವೂ ಒಬ್ಬೊಬ್ಬನಾಗಿ ಬೋಧಿಸಿ ಶಾಸ್ತ್ರಧರ್ಮ ವಿಧೇಯನನ್ನಾಗಿ ಮಾಡಿದರೆ ನಮ್ಮ ದೇಶದಲ್ಲಿ ನಾಸ್ತಿಕತೆಯು ನಾಶವಾಗಿ ಎಲ್ಲರೂ ಆಸ್ತಿಕರಾಗುತ್ತಾರೆ ಪ್ರತಿಯೊಬ್ಬರೂ ಶಾಸ್ತ್ರಕ್ಕೆ ವಿಧೇಯರಾಗುತ್ತಾರೆ, ಲಂಚ ಮುಂತಾದ ಅನ್ಯಾಯಾಚಾರಗಳು ನಾಶವಾಗುತ್ತ, ಸುಖಶಾಂತಿಗಳು ತಾಂಡವವಾಡುತ್ತವೆ! ದೇಶದಲ್ಲಿ ಸಮೃದ್ಧಿಯುಂಟಾಗುತ್ತದೆ : ಸಂಘಟಿತರಾದ ಒಂದೇ ಭಾವನೆ ಹೊಂದಿರುವ ಪ್ರಜೆಗಳಿಂದಲೂ, ಶಾಸನಕರ್ತರಿಂದಲೂ ಧರ್ಮಮಾರ್ಗದಲ್ಲಿ ನಡೆಸುತ್ತಿರುವ ರಾಜ್ಯಕ್ಕೆ ಕ್ಷೇಮವುಂಟಾಗುತ್ತದೆ ; ಇಂತಹ ರಾಜ್ಯವನ್ನು ಕಂಡು ಅಕ್ರಮಣ ಮಾಡಲು ಎಂದೂ ಪ್ರಯತ್ನಿಸುವುದಿಲ್ಲ ; ಪ್ರಯತ್ನಿಸಿದರೂ ದಂಡೋಪಾಯದಿಂದ ಅವನ್ನು ಓಡಿಸಲು ನಮಗೆ ಬಲ ಬಂದಿರುತ್ತದೆ.

ಈ ವಿಷಯವನ್ನೆಲ್ಲಾ ತಾವುಗಳೆಲ್ಲರೂ ಗಮನಿಸಿ ಶಾಸ್ತ್ರಧರ್ಮ ಪ್ರಚಾರ ಸಭೆಗೆ ಪೂರ್ಣ ಬೆಂಬಲ ನೀಡಬೇಕಾಗಿ ಕೋರುತ್ತೇನೆ

ಶ್ಲೋ॥ ಜಯಂತಿ ಶಾಸ್ತ್ರಾಣಿ ದ್ರವಂತಿ ದಾಂಭಿಕಾಃ।
ಸೃಶ್ಯಂತಿ ಸಂಶೋ ವಿಶಂತಿ ನಾಸ್ತಿಕಾಃ

[ಹೊಂಗನೂರು ಶಾಖಾ ಶಾಸ್ತ್ರಧರ್ಮ ಪ್ರಚಾರ ಸಭೆಯ ೬ನೆಯ ವಾರ್ಷಿಕೋತ್ಸವದಲ್ಲಿ ಶ್ರೀ ಅನಂತನರಸಿಂಹಯ್ಯಂಗಾರ್ಯರ ಭಾಷಣ]

Sri 'SATYAVADI' Daily

Oldest Newspaper in the State] — Golden Jubilee 1966

Edited, printed and published by M. S. Krishna Rao (prop) at the Satyavadi Press, Chamarajapuram, Mysore-4.

ವುಡ್‌ಲಾಂಡ್ 2 ನೇ ವಾರದಲ್ಲಿ

ಶಿ ನಿ ★

ಪ್ರೇಕ್ಷಕರಿಂದ ಕುಂಚಕುಳಿಕಾವ ಚಿತ್ರಮಂದಿರದಲ್ಲಿ ಪ್ರದರ್ಶಿತವಾಗುತ್ತಿದೆ

ಸುಂದರ ದೃಶ್ಯಗಳು, ಸವಿ ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

★

ಜಾನ್‌ವರ್ JANWAR

ನಾಕ್ಷ- ಶಮ್ಮಿ ಕಪೂರ್, ರಾಜಶ್ರೀ, ರಾಜೇಂದ್ರನಾಥ್, ಪೃಥ್ವಿರಾಜ್

ಅಪೆರ— ಅಮೋಘ 2 ನೇ ವಾರ

ಅತ್ಯಮೋಘ ಕನ್ನಡ ಚಿತ್ರಾಂತ್ಯ — — ಪ್ರತಿದಿನ 3 ಆಟಗಳು

ನನ್ನ ಕರ್ತವ್ಯ

ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನಂಜಂಡರಾಜು

ಚಂದ್ರಶೇಖರ್, ಸಂಧ್ಯಾ, ಜಯ ಲಲಿತ

SHAKTI

—

SUDHA

A Superb Tonic

ಗೋರಕ್ಷಣೆ ವಿಶೇಷವಾಗಿ ಕಾರ್ಯಗಳು ಹೆಚ್ಚಿನಾಗಿ ನಡೆಯುತ್ತಿವೆ



ವಿಶೇಷ— ಗೋರಕ್ಷಣ ಅಭಿಯಾನ ಪ್ರಾರಂಭವಾದಂದಿನಿಂದ ಕೊಲ್ಲಲು